ಕೆ. ಯಾಲಕ್ಕಿಗೌಡ
ನಿರ್ದೇಶಕರು, (ಪಂಚಾಯತ್ ರಾಜ್)
K. YALAKKI GOWDA
Director, (Panchayat Raj)

ಕರ್ನಾಟಕ ಸರ್ಕಾರ ಸಚಿವಾಲಯ
ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆ
Karnataka Government Secretariat
Rural Development & Panchayat Raj Department

ಅ.ಸ. ಪತ್ರ ಸಂ. ಗ್ರಾಅಪ 307 ಗ್ರಾಪಂಅ 2014 ದಿನಾಂಕ 26.06.2014

ಮಾನ್ಯರೆ,

ವಿಷಯ: ಗ್ರಾಮ ಪಂಚಾಯತಿಗಳ ಬೀದಿ ದೀಪಗಳ ನಿರ್ವಹಣಾ ಮಾಹಿತಿಯನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಇದೇ ಸಮಸಂಖ್ಯೆಯ ಪತ್ರ ದಿನಾಂಕ 19.4.2014 ಮತ್ತು 21.4.2014.
2. ನಿರ್ದೇಶಕರು (ಪಂ.ರಾಜ್) ರವರ ಅ.ಸ. ಪತ್ರ ದಿನಾಂಕ 12.5.2014, 19.5.2014, 03.06.2014 ಮತ್ತು 17.6.2014.
3. ಕಾರ್ಯದರ್ಶಿಗಳು (ಪಂ.ರಾಜ್) ರವರ ಅ.ಸ. ಪತ್ರ ದಿನಾಂಕ 21.6.2014.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಗ್ರಾಮ ಪಂಚಾಯತಿಗಳ ಬೀದಿ ದೀಪಗಳ ನಿರ್ವಹಣಾ ಮಾಹಿತಿಯನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸುವ ಬಗ್ಗೆ ಬರೆದಿರುವ ಉಲ್ಲೇಖಿತ ಪತ್ರಗಳ ಕಡೆಗೆ ತಮ್ಮ ಗಮನವನ್ನು ಸೆಳೆಯಲಾಗಿದೆ.

ಪಂಚತಂತ್ರ ತಂತ್ರಾಂಶದಲ್ಲಿನ ಅಂಕಿ ಅಂಶಗಳನ್ನು www.panchatantra.kar.nic.in/stat ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದು. ಆದಾಗ್ಯೂ, ದಿನಾಂಕ 24.6.2014ರ ಪಂಚತಂತ್ರ ತಂತ್ರಾಂಶದಲ್ಲಿನ ಬೀದಿ ದೀಪಗಳ ನಿರ್ವಹಣಾ ಮಾಹಿತಿಯ ಅಂಕಿ ಅಂಶಗಳನ್ನು ಇದರೊಂದಿಗೆ ಲಗತ್ತಿಸಿದೆ.

ಬೀದರ, ಚಿತ್ರದುರ್ಗ, ಧಾರವಾಡ, ಕೋಲಾರ, ಕೊಪ್ಪಳ, ರಾಯಚೂರು, ಯಾದಗಿರಿ ಜಿಲ್ಲೆಗಳ ಪ್ರಗತಿಯು ಎರಡಂಕಿಯನ್ನು ದಾಟದಿರುವುದು ವಿಷಾಧನೀಯ. ಮುಂದಿನ ವಿಳಂಬಕ್ಕೆ ಆಸ್ಪದ ನೀಡದಂತೆ ಪಂಚತಂತ್ರ ತಂತ್ರಾಂಶದಲ್ಲಿ ಬೀದಿ ದೀಪಗಳ ನಿರ್ವಹಣಾ ಮಾಹಿತಿಯ ಅಳವಡಿಕೆ ಕಾರ್ಯವನ್ನು ಮತ್ತಷ್ಟು ಚುರುಕುಗೊಳಿಸಲು ಸೂಚಿಸಿದೆ. ಉಳಿದ ಜಿಲ್ಲೆಗಳು ಸಹ ಈ ವಿಷಯದಲ್ಲಿ ಕ್ರಮ ವಹಿಸಲು ತಿಳಿಸಿದೆ.

5629 ಗ್ರಾಮ ಪಂಚಾಯತಿಗಳ ಪೈಕಿ ಕೇವಲ 1220 ಗ್ರಾಮ ಪಂಚಾಯತಿಗಳ ಮಾತ್ರ ತಂತ್ರಾಂಶದಲ್ಲಿ ಮಾಹಿತಿಯನ್ನು ಅಳವಡಿಸಿರುವುದು ತೀರಾ ನಿರಾಶಾದಾಯಕವಾಗಿರುತ್ತದೆ. ಪ್ರತಿ ನಿತ್ಯ ಮಾನ್ಯ ಗ್ರಾ.ಅ&ಪಂ.ರಾಜ್ ಸಚಿವರು, ಅಪರ ಮುಖ್ಯ ಕಾರ್ಯದರ್ಶಿಗಳು ಪಂಚತಂತ್ರ ತಂತ್ರಾಂಶವನ್ನು ವೀಕ್ಷಣೆ ಮಾಡುತ್ತಿದ್ದು, ಮಾಹಿತಿ ಅಳವಡಿಕೆಯಲ್ಲಿ ಆಗುತ್ತಿರುವ ಕಳಪೆ ಸಾಧನೆಯನ್ನು ಕಂಡು ತೀವ್ರ ಅಸಮಾಧಾನ ವ್ಯಕ್ತಪಡಿಸಿರುತ್ತಾರೆ.

ದಿನಾಂಕ 30.06.2014 ರಂದು ಮಾನ್ಯ ಗ್ರಾ.ಅ&ಪಂ.ರಾಜ್ ಸಚಿವರು ಪಂಚಾಯತ್ ರಾಜ್ ವಿಭಾಗದ ಪ್ರಗತಿ ಪರಿಶೀಲನೆ ನಡೆಸುತ್ತಿದ್ದು, ಪಂಚತಂತ್ರ ತಂತ್ರಾಂಶದಲ್ಲಿ ಮಾಹಿತಿಯನ್ನು ಅಳವಡಿಸುವಲ್ಲಿ ಕಳಪೆ ಸಾಧನೆ ಮಾಡಿರುವ ಅಧಿಕಾರಿಗಳ ಹೆಸರುಗಳನ್ನು ಆ ದಿನ ಮಾನ್ಯ ಸಚಿವರ ಗಮನಕ್ಕೆ ತಂದು ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಬಹುಮಹಡಿ ಕಟ್ಟಡ, 3ನೇ ಮಹಡಿ, ಬೆಂಗಳೂರು – 560 001 M.S. Building, 3rd Floor, Bangalore - 560 001
Tele : 080-2235 3925 / 2203 2533 Fax : 080-2235 3925 e-mail : pr.kar@nic.in

ಆದ್ದರಿಂದ, ಈ ವಿಷಯವನ್ನು ವೈಯುಕ್ತಿಕ ಗಮನಹರಿಸಿ ಬೀದಿ ದೀಪಗಳ ನಿರ್ವಹಣಾ ಮಾಹಿತಿಯನ್ನು ಪಂಚತಂತ್ರ ತಂತ್ರಾಂಶದಲ್ಲಿ ಕಡ್ಡಾಯವಾಗಿ ಅಳವಡಿಸಲು ಕ್ರಮ ವಹಿಸುವಂತೆ ಮತ್ತೊಮ್ಮೆ ತಿಳಿಸಿದೆ.

**ಆದರಗಳೊಡನೆ,**

ತಮ್ಮ ವಿಶ್ವಾಸಿ,

26/6/14.

ಎಲ್ಲಾ ಜಿಲ್ಲಾ ಪಂಚಾಯತಿಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.